ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) 2005–06ನೇ ಸಾಲಿನಲ್ಲಿ ಕಾಗವಾಡ ಮತಕ್ಷೇತ್ರದಲ್ಲಿ ಒಟ್ಟು ರೂ 225 00 ಲಕ್ಷಗಳ ಅಂದಾಜು ಮೊತ್ತದ 20 ಕಾಮಗಾರಿಗಳಿಗೆ ರೂ 223 12 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ ಹಾಗೂ 2006–07ನೇ ಸಾಲಿನಲ್ಲಿ ರೂ 200 00 ಲಕ್ಷಗಳ ಅಂದಾಜು ಮೊತ್ತದ 1 ಕಾಮಗಾರಿಗೆ ರೂ 43 00 ಲಕ್ಷಗಳ ವೆಚ್ಚವನ್ನು ಭರಿಸಲಾಗಿರುತ್ತದೆ

ಆ) ಬಂದಿದೆ

ಇ) ಕಾಗವಾಡ ಮತಕ್ಷೇತ್ರ ವ್ಯಾಪ್ತಿಯಲ್ಲಿ ಮೂರು ಸಕ್ಕರೆ ಕಾರ್ಖಾನೆಗಳಿದ್ದು ಈ ರಸ್ತೆಗಳು ಹದಗೆಟ್ಟಿರುವುದರಿಂದ ಕಬ್ಬು ಸಾಗಾಣಿಕೆಗೆ ರೈತರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ರಸ್ತೆಗಳ ದುರಸ್ತಿಗಾಗಿ ಆಗಾಗ ಸರ್ಕಾರದಿಂದ ಹಣ ಬಿಡುಗಡೆಯಾಗುತ್ತಿರುತ್ತದೆ

1433 (1320) ಶ್ರೀ ದೇಶಪಾಂಡೆ ಅರ್ ವಿ (ಹಳಿಯಾಳ) – ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು,

ಆ) ಉತ್ತರ ಕನ್ನಡದ ಅತಿ ರಮ್ಯ ಸ್ಥಳವಾದ ದಾಂಡೇಲಿ ವಿಭಾಗವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸಲು ಸರ್ಕಾರವು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆಯೆ,

ಇ) ಹಾಗಿದ್ದಲ್ಲಿ ವಿವರಗಳೇನು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಪ್ರವಾಸಿ ಆಕರ್ಷಣೆಗಳನ್ನೊಂದಿರುವ ಜಿಲ್ಲೆಯಾಗಿರುತ್ತದೆ ಕರ್ನಾಟಕದ ಕಾಶ್ಮೀರ ಎಂದೇ ಪ್ರಸಿದ್ಧ ಪಡೆದ ಕಾರವಾರದ

ಕಡಲು ತೀರಗಳು ಬೋರ್ಗರೆದು ಧುಮುಕುವ ಜಲಪಾತಗಳು, ಪ್ರಕೃತಿ ರಮ್ಯ ತಾಣಗಳು, ದಾಂಡೇಲಿ ವನ್ಯ ಮೃಗಧಾಮ ಮುಂತಾದ ವೈವಿಧ್ಯಮಯ ತಾಣಗಳು ಇಲ್ಲಿವೆ ಇಲಾಖೆಯು ಅವುಗಳ ಅಭಿವೃದ್ಧಿಗಾಗಿ ಕೆಳಕಂಡ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ

1 ಕಾರವಾರ –

1) ಕಾರವಾರ ಜಿಲ್ಲಾ ಕೇಂದ್ರದಲ್ಲಿ ಪ್ರವಾಸಿ ಕಛೇರಿ ತೆರೆಯಲಾಗಿದೆ

2) ರೂ 70 00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿ ನಿವಾಸವನ್ನು ನಿರ್ಮಿಸಿ ಅರಣ್ಯ, ವಸತಿ ಮತ್ತು ವಿಹಾರಧಾಮ ಸಂಸ್ಥೆಗಳ ಮೂಲಕ ಖಾಸಗೀಕರಣ ಗೊಳಿಸಲಾಗಿದೆ

3) ದೇವಭಾಗ್‌ನಲ್ಲಿ ಅರಣ್ಯವಸತಿ ಮತ್ತು ವಿಹಾರಧಾಮದ ವತಿಯಿಂದ ಜಾಗತಿಕ ಮಟ್ಟದ ರೆಸಾರ್ಟ್ಸ್ ನಡೆಸಲಾಗುತ್ತಿದೆ

4) ಅಂದಾಜು ರೂ 197 40 ಲಕ್ಷಗಳ ವೆಚ್ಚದಲ್ಲಿ ರ್ಯಾಗೂರು ಕಡಲ ತೀರವನ್ನು ಅಭಿವೃದ್ಧಿಪಡಿಸಲಾಗುತ್ತಿದೆ

2 ಉತ್ತರ ಕನ್ನಡ ಜಿಲ್ಲೆಯ ಜೇನುಕಲ್ಲುಗುಡ್ಡ, ಸಹಸ್ರಲಿಂಗ್, ಶಿವಗಂಗೆ ಜಲಪಾತ, ಕಾವಲಗುಹೆಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾಡಳಿತಕ್ಕೆ ರೂ 97 50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

3 ಅರಣ್ಯ, ವಸತಿ ಮತ್ತು ವಿಹಾರಧಾಮ ಸಂಸ್ಥೆ ವತಿಯಿಂದ ಕಾಳಿ ನದಿಯಲ್ಲಿ ಹೌಸ್ ಬೋಟ್ ನಡೆಸಲಾಗುತ್ತಿದೆ

4 ಓಂ ಬೀಚಿನಲ್ಲಿ ಅರಣ್ಯ, ವಸತಿ ಮತ್ತು ವಿಹಾರಧಾಮ ಸಂಸ್ಥೆ ವತಿಯಿಂದ ವಸತಿ ಸೌಲಭ್ಯವನ್ನು ಖಾಸಗೀಕರಣಗೊಳಿಸಿ ನಡೆಸಲಾಗುತ್ತಿದೆ

5 ಗೋಕರ್ಣದಲ್ಲಿ ಪ್ರವಾಸಿ ವಸತಿಯನ್ನು ಖಾಸಗೀಕರಣಗೊಳಿಸಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

6 ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಮಟ್ಟದ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಕೆಲವು ಅಗತ್ಯ ಪ್ರವಾಸಿ ಸೌಲಭ್ಯ ಒದಗಿಸಲು ರೂ 15 00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ

7 ರೂ 60 00 ಲಕ್ಷಗಳ ವೆಚ್ಚದಲ್ಲಿ ಅತ್ತಿವೇರಿ ಪಕ್ಷಿಧಾಮವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ

8 ಗೋಕರ್ಣದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಿಸಲಾಗುತ್ತಿದೆ

9 ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕು ಕಾಸರಗೋಡು ಹಾಗೂ ಭಟ್ಕಳ ತಾಲ್ಲೂಕಿನ ಮುರಡೇಶ್ವರ ಕಡಲು ತೀರ, ಕುಮಟಾ ತಾಲ್ಲೂಕಿನ ಗೋಕರ್ಣ ಕಡಲು ತೀರಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಂಡಿದ್ದು, ಯೋಜನಾ ವರದಿಗಳನ್ನು ತಯಾರಿಸಲಾಗುತ್ತಿದೆ

ಆ) ದಾಂಡೇಲಿ ವನ್ಯ ಮೃಗಧಾಮವು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಇದ್ದು, ಇಲ್ಲಿ ಹೆಚ್ಚಿನ ಯೋಜನೆಗಳಿಗೆ ನಿವೇಶನಗಳು ಲಭ್ಯತೆ ಇರುವುದಿಲ್ಲ ಪ್ರಸ್ತುತ ಇಲ್ಲಿ ಇರುವ ಅತಿಥಿಗೃಹವನ್ನು ಪರಿಸರ ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿ ಪಡಿಸಿ ಅರಣ್ಯ ವಸತಿ ಮತ್ತು ವಿಹಾರ ಧಾಮ ಸಂಸ್ಥೆಯ ಮೂಲಕ ನಡೆಸಲಾಗುತ್ತಿದೆ ಇಲ್ಲಿ ಕಾಳಿ ನದಿಯಲ್ಲಿ ರಿವರ್ ರ್ಯಾಪ್ಟಿಂಗ್ ಸಾಹಸ ಜಲಕ್ರೀಡೆ ಕಾರ್ಯಕ್ರಮ ನಡೆಸಲಾಗುತ್ತಿದೆ

ಇ) ಉದ್ಭವಿಸುವುದಿಲ್ಲ

1434 (1669) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) – ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಕೊಟ್ಟು ಸರ್ಕಾರದ ಸೇವೆಗೆ ಸೇರಿ ಹಾಲಿ ಉದ್ಯೋಗದಲ್ಲಿರುವವರ ಸಂಖ್ಯೆ ಎಷ್ಟು (ಇಲಾಖಾವಾರು ಮಾಹಿತಿ ನೀಡುವುದು),